# ತಾಂಬೂಲವ ಕೊಳ್ಳೋ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 262.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 142.
3. **Note:** This song is not available in Shri Betageri Krishna Sharma and Shri Bengeri Huchha Rayaru books.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these lyrics.

ರಾಗ: ರೀತಿಗೌಳ ತಾಳ: ಆದಿ

ತಾಂಬೂಲವ ಕೊಳ್ಳೋ ತಮನ ಮರ್ದನನೆ, ಕಮಲ ವದನನೆ || ಪ ||
ಅಂಬುಜಾಕ್ಷಿ, ಮೋದದಿ ಮಡಚಿ ಕೊಡುತಾಳೆ || ಅಪ ||

ಸಂಪಿಗೆಣ್ಣೆ ಅತ್ತರು ಚಂದನದೆಣ್ಣೆ
ಈ ಪರಿಪರಿ ವಿಧ ಪರಿಮಳದ ಎಣ್ಣೆ
ಕೆಂಪು ಕೇಸರಿ ಗಂಧ ಕಸ್ತೂರಿಯು
ಚಂಪಕ ಮೊದಲಾದ ಪುಷ್ಪವ ಮುಡಿಯೊ || 1 ||

ಚಿಕ್ಕಣಿ ಅಡಿಗೆ ಕೇದಿಗೆ ಕಾಚ್ ಕೂಡಿದ ಏ-
ಲಕ್ಕಿ ಜಾಯಿಕಾಯಿ ಲವಂಗ ಜಾಯಪತ್ರೆಯು
ಮೌಕ್ತಿಕದ ಸುಣ್ಣ ಕರ್ಪೂರ ಬೆರಸಿ ತಾ
ರುಕ್ಮಿಣಿ ದೇವಿಯು ಸಮರ್ಪಿಸುತಾಳೆ || 2 ||

ಮಂಚವ ಹಾಕಿದೆ ಮಲ್ಲಿಗೆ ಹೂವ ತರಿಸಿದೆ
ಮುಂಚೆ ಬಂದು ಮಲಗಯ್ಯ ಮಿಂಚುತಲಿ
ಚಂಚಲಾಕ್ಷಿಯು ನಿನ್ನ ಇದಿರು ನೋಡುತಾಳೆ
ಪಂಚಬಾಣನಯ್ಯ ಶ್ರೀ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ತಮನ** – ತಮವೆಂಬ ಅಸುರನನ್ನು (ಮತ್ಸ್ಯಾವತಾರದ ಸಂದರ್ಭ).

**ಚಂಚಲಾಕ್ಷಿ** – ಲಕ್ಷ್ಮೀ.

**Classification:** Keerthane
**Ankita:** sri purandara vittala
**Location:** NA
**Category:** Krishna Stuti,
**Sub-Category:** Krishna, padma, Lakshmi, gandha, Kasturi, pushpa, Rukmini, mancha, mallige,
**Pravachana:** NA
**Explanation:** NA